**ಸಿಸಿ ನಂಃ 1830/2024**

**ಪಿ. ಡಬ್ಲ್ಯು 1**

**(ಇಂದು ದಿನಾಂಕಃ 16-08-2025 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ಎಸ್ ಬಿ ರವರಿಂದಃ**

ನೀವು ನಿಮ್ಮ ಫಿರ್ಯಾದಿಯಲ್ಲಿ ಸುಮಾರು 8,00,000/- ರೂಗಳ ಕಲ್ಲಂಗಡಿ ಹಣ್ಣನ್ನು ಬೆಳೆಸಿದ್ದೀರಿ ಅಂತಾ ಹೇಳಿದ್ದು,ನಿಮಗೆ ಎಷ್ಟು ಜಮೀನು ಇದೆ ಎಂದರೆ ಸಾಕ್ಷಿ ನನಗೆ ಯಾವುದೇ ಜಮೀನು ಇರುವುದಿಲ್ಲ ಬೇರೆಯವರ ಜಮೀನನ್ನು ಬಾಡಿಗೆಗೆ ಪಡೆದು ಕಲ್ಲಂಗಡಿ ಬೆಳೆ ಬೆಳೆದಿರುತ್ತೇನೆ ಅಂತಾ ಉತ್ತರಿಸುತ್ತಾರೆ. ಬೇರೆಯವರ ಜಮೀನನ್ನು ಕಲ್ಲಂಗಡಿ ಬೆಳೆಸುವ ಬಗ್ಗೆ ಬಾಡಿಗೆಗೆ ತೆಗೆದುಕೊಂಡ ಬಗ್ಗೆ ಅಗ್ರಿಮೆಂಟನ್ನು ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ. ಆ ರೀತಿ ಅಗ್ರಿಮೆಂಟನ್ನು ಮಾಡಿಕೊಳ್ಳಲು ನಿಮಗೇನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ. ಬೇರೇಯವರ ಜಮೀನನ್ನು ಬಾಡಿಗೆಗೆ ಪಡೆದುಕೊಂಡು ಕಲ್ಲಂಗಡಿ ಹಣ್ಣನ್ನು ಬೆಳೆಯಿಸಿರುತ್ತೇನೆ ಅಂತಾ ತೋರಿಸಲು ನಾನು ಯಾವುದೇ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನೀವು ಹೇಳಿದಂತೆ ರೂ. 8,00,000/- ದ ಕಲ್ಲಂಗಡಿ ಹಣ್ಣನ್ನು ಎಷ್ಟು ಬೆಳೆಗಳ ಮೂಲಕ ತೆಗೆದಿರುತ್ತೀರಿ ಎಂದರೆ ಸಾಕ್ಷಿ 2 ಬೆಳೆಗಳಲ್ಲಿ ತೆಗೆದಿರುತ್ತೇನೆ ಅಂತಾ ಉತ್ತರಿಸುತ್ತಾರೆ.

2. ನೀವು ಕಳೆದ 10 ವರ್ಷಗಳಿಂದ ಕಲ್ಲಂಗಡಿ ಹಣ್ಣು ಬೆಳೆಸಿರುತ್ತೇನೆ ಅಂತಾ ಹೇಳಿದ್ದು, ನೀವು ಆದಾಯ ತೆರಿಗೆ ಪಾವತಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ.

3. ನಾನು ವಕೀಲರ ನೋಟಿಸಿನಲ್ಲಿ ಹಾಗೂ ಫಿರ್ಯಾದಿನಲ್ಲಿ ಮೊದಲ ಕಲ್ಲಂಗಡಿ ಬೆಳೆ 2022 ಕ್ಕೆ ಸಂಬಂಧಿಸಿದಂತೆ ಆರೋಪಿ ರೂ.4,33,330/-ಗಳಿಗೆ ಚೆಕ್ಕು ಹಾಗೂ ಇನ್ನೊಂದು ಬೆಳೆಗೆ ಸಂಬಂಧಿಸಿದಂತೆ ರೂ.2,80,000/-ಗಳಿಗೆ ಆರೋಪಿ ಚೆಕ್ಕು ಕೊಟ್ಟಿರುತ್ತಾರೆ ಅಂತಾ ನಮೂದಿಸಿರುತ್ತೇನೆ. ನನಗೆ ಆರೋಪಿ ಎರಡು ಚೆಕ್ಕು ಕೊಟ್ಟಿಲ್ಲ ಒಂದೇ ಚೆಕ್ಕು ಕೊಟ್ಟಿರುತ್ತಾರೆ. ಫಿರ್ಯಾದಿಯಲ್ಲಿ ಹಾಗೂ ನೋಟಿಸಿನಲ್ಲಿ ಎರಡು ಚೆಕ್ಕುಗಳನ್ನು ಆರೋಪಿ ನನಗೆ ಕೊಟ್ಟಿದ್ದಾರೆ ಅಂತಾ

ನಮೂದಿಸಿರುವುದು ತಪ್ಪಾಗಿದೆಯಾ ಎಂದರೆ ಸಾಕ್ಷಿ ಹೌದು ತಪ್ಪಾಗಿ ಆ ರೀತಿ ನಮೂದಿಸಲಾಗಿದೆ ಅಂತಾ ಉತ್ತರಿಸುತ್ತಾರೆ. ನಾನು ಆ ರೀತಿ ಎರಡು ಚೆಕ್ಕುಗಳನ್ನು ಅವರು ಕೊಟ್ಟಿದ್ದರು ಅಂತಾ ವಕೀಲರಿಗೆ ಹೇಳಿಲ್ಲ.

4. ಆರೋಪಿ ನಿಮಗೆ ಎಷ್ಟು ಹಣವನ್ನು ಮುಂಗಡವಾಗಿ ಕೊಟ್ಟಿರುತ್ತಾರೆ ಹಾಗೂ ಎಷ್ಟು ಹಣಕ್ಕೆ ಚೆಕ್ಕು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಆರೋಪಿ ನನಗೆ ಮುಂಗಡವಾಗಿ ಯಾವುದೇ ಹಣ ಕೊಟ್ಟಿಲ್ಲ, ಆರೋಪಿ ನನಗೆ ರೂ.4,33,330/- ರ ಚೆಕ್ಕನ್ನು ಕೊಟ್ಟಿರುತ್ತಾರೆ ಅಂತಾ ಉತ್ತರಿಸುತ್ತಾರೆ.

5. ನಾನು ಬೆಳೆದಿರುವ ಕಲ್ಲಂಗಡಿ ಹಣ್ಣುಗಳನ್ನು ತೂಕಕ್ಕೆ ಒಳಪಡಿಸಿದ್ದೀರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ಆರೋಪಿಗೆ ಕೊಟ್ಟಿದ್ದೇನೆ ಎನ್ನಲಾದ ಕಲ್ಲಂಗಡಿ ಹಣ್ಣುಗಳ ಒಟ್ಟು ತೂಕ ಎಷ್ಟು ಎಂದರೆ ಸಾಕ್ಷಿ ಈಗ ನೆನಪಿಲ್ಲ ಅಂತಾ ಉತ್ತರಿಸುತ್ತಾರೆ. ಒಟ್ಟು ಎಷ್ಟು ಕಿಲೋ ಗ್ರಾಂ ತೂಕದ ಕಲ್ಲಂಗಡಿ ಹಣ್ಣುಗಳನ್ನು ಆರೋಪಿಗೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಕೆ.ಜಿ ಲೆಕ್ಕದಲ್ಲಿ ಕೊಟ್ಟಿಲ್ಲ ಅಂತಾ ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು,ಕಿಲೋ ಗ್ರಾಂ ಒಂದಕ್ಕೆ ರೂ.9.50 ಪೈಸೆ ದರದಲ್ಲಿ ಕೊಟ್ಟಿದ್ದೆ ಅಂತಾ ಉತ್ತರಿಸುತ್ತಾರೆ. ಒಟ್ಟು ಎಷ್ಟು ತೂಕದ ಹಾಗೂ ಎಷ್ಟು ಮೌಲ್ಯದ ಕಲ್ಲಂಗಡಿ ಹಣ್ಣುಗಳನ್ನು ಆರೋಪಿಗೆ ಕೊಟ್ಟಿದ್ದೀರಿ ಎಂಬ ಬಗ್ಗೆ ಏನಾದರೂ ಬರವಣಿಗೆ, ಚೀಟಿ, ರಶೀದಿ, ಬಿಲ್ಲು ವಗೈರೆ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ. ಆ ರೀತಿ ಆರೋಪಿಯೊಂದಿಗೆ ಚೀಟಿ, ರಶೀದಿ, ಬಿಲ್ಲು ವಗೈರೆ ಮಾಡಿಕೊಳ್ಳಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ.

6. ಆರೋಪಿ ನಿಮಗೆ ಚೆಕ್ಕನ್ನು ಯಾವ ದಿನಾಂಕದಂದು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನಗೆ ದಿನಾಂಕ ನೆನಪಿಲ್ಲ ಅಂತಾ ಉತ್ತರಿಸುತ್ತಾರೆ. ಆರೋಪಿ ಯಾವ ಬ್ಯಾಂಕಿನ ಯಾವ ಶಾಖೆಯ ಚೆಕ್ಕನ್ನು ನಿಮಗೆ ನೀಡಿದ್ದಾರೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಅಂತಾ ಉತ್ತರಿಸುತ್ತಾರೆ. ಆರೋಪಿ ನೀಡಿದ್ದಾರೆ ಎನ್ನಲಾದ ಚೆಕ್ಕಿನ ನಂಬರು ಹೇಳಬಹುದೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಅಂತಾ ಉತ್ತರಿಸುತ್ತಾರೆ.

7. ಆರೋಪಿ ನಿಮಗೆ ಚೆಕ್ಕನ್ನು ಏಕೆ ಕೊಟ್ಟಿದ್ದರು ಎಂದರೆ ಸಾಕ್ಷಿ ನಿಮಗೆ ನನ್ನ ಮೇಲೆ ವಿಶ್ವಾಸ ಇಲ್ಲದೇ ಇದ್ದರೇ ಈ ಚೆಕ್ಕನ್ನು ಇಟ್ಟುಕೊಳ್ಳಿ ಅಂತಾ ಕೊಟ್ಟಿದ್ದರು ಅಂತಾ ಉತ್ತರಿಸುತ್ತಾರೆ.

**ಸಿಸಿ ನಂಃ** 1830/2024

**ಪಿ. ಡಬ್ಲ್ಯು 1**

8. ನೀವು ಆರೋಪಿಗೆ ಯಾವತ್ತು ಸಹ ಯಾವುದೇ ಕಲ್ಲಂಗಡಿ ಹಣ್ಣುಗಳನ್ನು ಕೊಟ್ಟಿದ್ದೆ ಇರುವುದಿಲ್ಲ ಎಂದರೆ ಸರಿಯಲ್ಲ. ಬೇರೇಯವರ ಜಮೀನಿನಲ್ಲಿ ಕಲ್ಲಂಗಡಿ ಹಣ್ಣನ್ನು ಬೆಳೆಸಿದ್ದೀರಿ ಅಂತಾ ಹೇಳಿದ್ದು, ಅದು ಯಾರ ಜಮೀನು ಎಂದರೆ ಸಾಕ್ಷಿ ಅಗ್ರನಾಯ್ಕ ಎನ್ನುವವರ ಜಮೀನಿನಲ್ಲಿ ಅಂತಾ ಉತ್ತರಿಸುತ್ತಾರೆ. ಆ ಜಮೀನಿನ ಸರ್ವೆ ನಂಬರು ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ. ನೀವು ಹೇಳುವ ಅಗ್ರನಾಯ್ಕರವರಿಗೆ ಮೂಡಗೇರಿ ಗ್ರಾಮದಲ್ಲಿ ಯಾವುದೇ ಸಾಗುವಳಿ ಜಮೀನು ಇರುವುದಿಲ್ಲ ಎಂದರೆ ಸರಿ. ನಾನು ಕಲ್ಲಂಗಡಿ ಹಣ್ಣುಗಳನ್ನು ಕಾಡಿನಲ್ಲಿ ಬೆಳೆಸಿರುತ್ತೇನೆ.

9. ನಿಪಿ-5 ರ ವಕೀಲರ ನೋಟಿಸಿನಲ್ಲಿ ಏನೆಲ್ಲಾ ಬರೆಯಲಾಗಿದೆ ಎಂಬುದು ನನಗೆ ಗೊತ್ತಿಲ್ಲ. ನಿಮ್ಮ ಫಿರ್ಯಾದಿಯಲ್ಲಿ ಏನೆಲ್ಲಾ ಬರೆಯಲಾಗಿದೆ ಎಂಬ ಬಗ್ಗೆ ಗೊತ್ತಿದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಅಂತಾ ಉತ್ತರಿಸುತ್ತಾರೆ.

10. ಆರೋಪಿ ನಿಮ್ಮ ಜೊತೆ ಯಾವುದೇ ಕಲ್ಲಂಗಡಿಯ ವ್ಯವಹಾರವನ್ನೇ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿ ನಿಮಗೆ ಕಲ್ಲಂಗಡಿ ಹಣ್ಣಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಚೆಕ್ಕನ್ನು ಕೊಟ್ಟಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಬೇರೆಯವರೊಂದಿಗೆ ಬೇರೆ ವ್ಯವಹಾರಕ್ಕೆ ಸಂಬಂಧಿಸಿದಂತೆ ಕೊಟ್ಟಿದ್ದ ಚೆಕ್ಕನ್ನು ನೀವು ದುರುಪಯೋಪಡಿಸಿಕೊಂಡು ಅವರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಕಾರವಾರ .**